ಅ) 94 (ತೊಂಬತ್ನಾಲ್ಕು)

ಇ) ಬಂದಿದೆ.

ಈ) ಹೌದು, ಸರ್ಕಾರದ ಆದೇಶ ಸಂಖ್ಯೆ ಸಂಕೀ 721 ಕಪಧ 97, ದಿ.24.12.97ರಲ್ಲಿ ರೂ. 50,000-00ಗಳನ್ನು ಮಂಜೂರು ಮಾಡಲಾಗಿದೆ.

ಉ) ಅ) ಇಲ್ಲ

ಆ) ಬೆಳಗಾವಿ ಜಿಲ್ಲಾ, ಜಿಲ್ಲಾಧಿಕಾರಿಗಳವರ ಕಛೇರಿಗೆ ಬಯಲುರಂಗಮಂದಿರ ನಿರ್ಮಾಣಕ್ಕೆಂದು ರೂ. 2.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಪತ್ರ ಬಂದಿರುವುದಿಲ್ಲ.

ಊ) ಪರಿಶೀಲಿಸಲಾಗುವುದು.

ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ ಕೆಲಸವನ್ನು ಪೂರ್ಣಗೊಳಿಸುವುದು.

2234 (2705) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇಂದ್ರ ಸರ್ಕಾರ ಸಿಆರ್‌ಎಫ್ ಫಂಡಿನಲ್ಲಿ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನಲ್ಲಿ ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ ಹಾಗೂ ಜತ್ ಜಂಬೋಟ್ ರಸ್ತೆ ನಿರ್ಮಿಸಲು ಪತ್ರ ಸಂ.ಎಸ್.ಎನ್‌ಹೆಚ್. 28021:39:ಕೆಎಸ್‌ಟಿ:ಒಆರ್ ದಿನಾಂಕ : 2-11-1999ರ ಪ್ರಕಾರ 175 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ ಸಂಗತಿ ನಿಜವೇ?

ಆ) ರಾಜ್ಯ ಸರ್ಕಾರ ಪ್ರಥಮ ಹಂತವಾಗಿ ರೂ. 66 ಲಕ್ಷಗಳಿದೆ ಎಂದು ಆಡಳಿತಾತ್ಮಕವಾಗಿ ಮಂಜೂರಾತಿ ಹಾಗ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು.

ಇ) ಕೇಂದ್ರ ಸರ್ಕಾರ 175 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದರಿಂದ ಹಾಗೂ ಈ ರಸ್ತೆಯು ಬ್ರಿಟಿಶರ ಜೊತೆಗೆ ಹೋರಾಡಿದ ವೀರ ಮಹಿಳೆ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ಪ್ರಮುಖ ರಸ್ತೆಯಾಗಿರುವುದರಿಂದ ಉಳಿದ 109 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಕೊಟ್ಟು ಕೂಡಲೇ ಕೆಲಸ ಪೂರ್ಣ ಮಾಡಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಸಿಆರ್‌ಎಫ್ ಫಂಡಿನಲ್ಲಿ ಈಗಾಗಲೇ ಮಂಜೂರಾದ ಕೆಲಸಗಳನ್ನು ತೆಗೆದುಕೊಳ್ಳಲು ಹಣಕಾಸಿನ ತೊಂದರೆ ಏನಾದರೂ ಇರುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಹೌದು

ಆ) ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ರೂ.66.00 ಲಕ್ಷಗಳಿಗೆ ದಿನಾಂಕ: 4-12-1997 ರಂದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಕಛೇರಿಯಿಂದ ದಿನಾಂಕ : 31-12-1997 ರಲ್ಲಿ ರೂ.66.00 ಲಕ್ಷಗಳಿಗೆ ನೀಡಲಾಗಿದೆ.

ಇ) ಕೇಂದ್ರ ಸರ್ಕಾರ ಅನುಮೋದಿಸಿದ್ದ ರೂ.175 ಲಕ್ಷಗಳಲ್ಲಿ ರೂ.100 ಲಕ್ಷಗಳು ಕೇಂದ್ರ ರಸ್ತೆ ನಿಧಿ ಯೋಜನೆ ಅನುದಾನದಿಂದಲೂ ಹಾಗೂ ರೂ.75.00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದಲೂ ಭರಿಸಲು ಸೂಚಿಸಲಾಗಿತ್ತು. ಲಭ್ಯವಿದ್ದ ಸಿಆರ್‌ಎಫ್ ಅನುದಾನಕ್ಕನುಗುಣವಾಗಿ ಸದರಿ ಕಾಮಗಾರಿಯನ್ನು ರೂ.66.00 ಲಕ್ಷಗಳಿಗೆ ರಾಜ್ಯ ಸರ್ಕಾರವು ಮಿತಿಗೊಳಿಸಿ ಆಡಳಿತಾತ್ಮಕ ಅನುಮೋದನೆ ನೀಡಿದ ಕಾರಣ ಕೇಂದ್ರ ಸರ್ಕಾರದ ಪಾಲಿನಲ್ಲಿ ರೂ. 34 ಲಕ್ಷಗಳನ್ನು ಈ ಕಾಮಗಾರಿಯಿಂದ ಹಿಂದಕ್ಕೆ ಪಡೆದು ರಾಜ್ಯದ ಒಟ್ಟು ಸಿಆರ್‌ಎಫ್ ನಿಧಿಗೆ ಸೇರಿಸಲಾಗಿದೆಯೆಂದು ಕೇಂದ್ರ ಸರ್ಕಾರದಿಂದ ಸೂಚಿಸಲಾಗಿದೆ. ಸದರಿ 66 ಲಕ್ಷಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಆದ್ದರಿಂದ ರೂ. 109 ಲಕ್ಷಗಳಿಗೆ ಉಳಿಕೆ ಕೆಲಸ ಕೈಗೊಳ್ಳು ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸಿಆರ್‌ಎಫ್ ಫಂಡ್‌ನಲ್ಲಿ ಈಗ ಮಂಜೂರಾದ ಕೆಲಸವನ್ನು ತೆಗೆದುಕೊಳ್ಳಲು ಹಣಕಾಸಿನ ತೊಂದರೆ ಇರುವುದಿಲ್ಲ.

ವಾಸ್ತುಶಿಲ್ಪ ವಿಭಾಗದ ಅವಶ್ಯಕತೆ ಬಗ್ಗೆ.

2235(3399) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಲೋಕೋಪಯೋಗಿ ಇಲಾಖೆಗೆ ಹೊಂದಿಕೊಂಡಿರುವ ವಾಸ್ತುಶಿಲ್ಪ ವಿಭಾಗವು ಕಾರ್ಯ ನಿರತವಾಗಿದ್ದರೂ ಕೂಡ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿ ಕುರಿತು ಅಂದಾಜು ವೆಚ್ಚ ಮತ್ತು ನೀಲಿನಕ್ಷೆಯನ್ನು ಖಾಸಗಿಯವರಿಂದ ತಯಾರಿಸುತ್ತಿರಲು ಕಾರಣವೇನು?

ಆ) ಹಾಗಿದಲ್ಲಿ ವಾಸ್ತುಶಿಲ್ಪ ವಿಭಾಗದ ಅವಶ್ಯಕತೆ ಇದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಸರ್ಕಾರದ ಎಲ್ಲಾ ಕಟ್ಟಡ ಕಾಮಗಾರಿಗಳಿಗೆ ವಾಸ್ತುಶಿಲ್ಪ ನಕ್ಷೆಗಳನ್ನು ವಾಸ್ತುಶಿಲ್ಪ ಇಲಾಖೆಯಲ್ಲಿ ತಯಾರಿಸಲಾಗುತ್ತಿದೆ. ಈ ಇಲಾಖೆಯಿಂದ ಯಾವುದೇ ಕಟ್ಟಡ ಕಾಮಗಾರಿಗಳ ನಕ್ಷೆ ತಯಾರಿಕೆಯನ್ನು ಖಾಸಗಿಯವರಿಗೆ ನೀಡಲಾಗಿಲ್ಲ. ವಿನ್ಯಾಸಗೊಳಿಸಿದ ಕಟ್ಟಡಗಳ